ISSN : 2320-0391

# सृजन ಸೃಜನ

हिन्दी-कन्नड साहित्य और संस्कृति

ಹಿಂದಿ-ಕನ್ನಡ ತ್ರೈಮಾಸಿಕ ಪತ್ರಿಕೆ

त्रैमासिक पत्रिका

जुलाई-सितम्बर २०१५




Scanned with CamScanner

# ಪರಿವಿಡಿ


| | | |
|---|---|---|
| ೧. ಪ್ರೊ. ದೊಡ್ಡರಂಗೇಗೌಡರ ಜೀವನ ಮತ್ತು ಸಾಧನೆ | • ಈಶ್ವರಗೌಡ ಎಂ. ಚೋಬಾರಿ | ೨೮ |
| ೨. ಜಿ.ಎನ್. ಮೋಹನ್ ಅವರ ಸಾಹಿತ್ಯ-ಸಂಸ್ಕೃತಿ ಚಿಂತನೆ ಒಂದು ಚರ್ಚೆ | • ಪ್ರೊ. ಬಿ. ಬಿ. ಡೆಂಗನವರ | ೩೦ |
| ೩. ಡಾ. ವೀರಣ್ಣ ರಾಜೂರ ಅವರ ಅಪ್ರಕಟಿತ ನಾಟಕಗಳು | • ಶ್ರೀನಿವಾಸ ದೊಡ್ಡಮನಿ | ೩೨ |
| ೪. ಶರಣರ ಲಘು ಸಾಹಿತ್ಯ ಪ್ರಕಾರ : ಉಯ್ಯಲು ಪದ ಸಾಹಿತ್ಯ | • ಪ್ರೊ. ಆರ್. ವಿ. ಪಾಟೀಲ | ೩೬ |
| ೫. ಜನಪದ ಕಲಾವಿದರ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು | • ಡಾ. ಫಕೀರನಾಯ್ಕ ದುಂ. ಗಡ್ಡಿಗೌಡರ | ೪೦ |
| ೬ ಉತ್ತರ ಕರ್ನಾಟಕದ ಹಬ್ಬಗಳ ಹುಟ್ಟು ಮತ್ತು ಬೆಳವಣಿಗೆ | • ಯಲ್ಲಪ್ಪ ವಾಯ್. ತೋಟಗಿ . | ೪೨ |
| ೭ ಈಶ್ವರ ಕಮ್ಮಾರ ಅವರ ಮಕ್ಕಳ ಕವಿತೆಗಳಲ್ಲಿ ಸಾಮಾಜಿಕ ವಸ್ತು | • ಡಾ ಅಮೋಗಸಿದ್ಧ ಈ. ಹಂಜಗಿ | ೪೫ |
| ೮. "ಡಾ. ತೇಜಸ್ವಿ ಕಟ್ಟಿಮನಿ ಅವರ ಅನುವಾದಿತ ಕೃತಿಗಳು" | • ಮಾರ್ಗದರ್ಶಕರು, ಡಾ. ಶ್ರೀಶೈಲ ನಾಗರಾಳ<br>ಸಹ ಲೇಖಕರು : ಪದ್ಮಾವತಿ ಭಾಗಪ್ಪ ಸೇಡಂಕರ್ | ೪೭ |
| ೯. ಕನ್ನಡ ಮಹಿಳಾ ಕಥಾ ಸಾಹಿತ್ಯ ಪರಂಪರೆ | • ಪ್ರೊ. ಸವಿತಾ ಎಂ. ಝುಳಕಿ | ೪೯ |
| ೧೦. ವಿಧಿಯಾಟ: ಜಿಜ್ಞಾಸೆ | • ಪ್ರೊ. ಬಿ. ಎಸ್. ಹಡಲಗೇರಿ | ೫೨ |
| **ಕಥೆ : (ಅನುವಾದ)** | | |
| ೧೧. ಪ್ರಾಯಶ್ಚಿತ | • ಡಾ. ರಮೇಶ ಪೋಖರಿಯಾಲ 'ನಿಶಂಕ'<br>ಅನುವಾದ : ಡಾ. ಎಸ್. ಟಿ. ಮೇರವಾಡೆ | ೫೭ |
| • ಕೀರ್ತನೆ | | ೩೯ |
| • ಮಂಕುತಿಮ್ಮ ಕಗ್ಗ | | ೪೪ |
| • ವಚನಗಳು | | ೫೫ |


■■

# ಜಿ.ಎನ್. ಮೋಹನ್ ಅವರ ಸಾಹಿತ್ಯ-ಸಂಸ್ಕೃತಿ ಚಿಂತನೆ ಒಂದು ಚರ್ಚೆ

• ಪ್ರೊ, ಬಿ. ಬಿ. ಡೆಂಗನವರ

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲೇ ಎಪ್ಪತ್ತರ ದಶಕದ ದಲಿತ ಬಂಡಾಯತ ಸಾಹಿತ್ಯ ಒಂದು ಮಹತ್ವದ ತಿರುವು ಎಂದು ಹೇಳಬಹುದು. ತಲತಲಾಂತರಗಳಿಂದ ವರ್ಣ, ಜಾತಿ, ವರ್ಗ, ಲಿಂಗ ತಾರತಮ್ಯವಾಗಿ ಬಾಯಿದ್ದೂ ಮೂಕರಂತಾಗಿದ್ದವರ ಕೊರಳ ದನಿಯಾಯಿತು. ಬ್ರಿಟಿಷ ವಸಾಹತುಶಾಹಿ ದುರಾಡಳಿತದಿಂದ ಬಿಡುಗಡೆಗೊಂಡ ನಂತರ ಸುಮಾರು ಮೂರು ದಶಕಗಳ ಕಾಲವಧಿಯಲ್ಲಿ ನಮ್ಮ ಜೀವನದ ಗತಿ ಬದಲಾಗುತ್ತ ನಡೆದರೂ ಸಮಾಜದಲ್ಲಿ ವರ್ಣ, ವರ್ಗ, ಜಾತಿ, ವ್ಯವಸ್ಥೆಯಲ್ಲಿ ಮಾತ್ರ ಬದಲಾಗಲಿಲ್ಲ. ಗಾಂಧಿ, ಅಂಬೇಡ್ಕರ್, ಲೋಹಿಯಾ ಮುಂತಾದ ಸಾಮಾಜಿಕ ಹೋರಾಟಗಾರರು ತರಬಯಸಿದ ಸಾಮಾಜಿಕ ಬದಲಾವಣೆ ಸಾಧ್ಯವಾಗದಿರುವುದು ೭೦ರ ದಶಕದಲ್ಲಿನ ಹೊಸ ತಲೆಮಾರಿನ ಲೇಖಕರು, ವಿಚಾರವಾದಿಗಳನ್ನು ಚಿಂತನೆಗೆ ಒಳ ಪಡಿಸಿತು.

ಇವೆಲ್ಲವುಗಳ ಜೊತೆಗೆ ಬಿ.ಬಸವಲಿಂಗಪ್ಪನವರ ಬೂಸಾ ಸಾಹಿತ್ಯ ಹೇಳಿಕೆ ಪ್ರಕರಣ, ರಾಷ್ಟ್ರದಲ್ಲಿ ಜಾರಿಗೆಯಾದ ತುರ್ತುಪರಿಸ್ಥಿತಿ, ಕರಾಳ ಶಾಸನ ಜಾರಿಗೆ ತಂದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ, ಧರ್ಮಸ್ಥಳ ಸಾಹಿತ್ಯ ಸಮ್ಮೇಳನ ತಳೆದ ಧೋರಣೆ ಇವೆಲ್ಲವೂ ಬೇರೆ ಬೇರೆ ಸಂವೇದನೆಗಳಿಗೆ, ಪ್ರಗತಿಪರ ಸಾಹಿತಿ, ಚಿಂತಕರ ಹುಟ್ಟಿಗೆ ಎಡೆಮಾಡಿ ಕೊಟ್ಟವು. "ಸಂಪ್ರದಾಯದಿಂದ ಹೊರ ಬರುವ, ಶೋಷಿತ ವರ್ಗದ ವಾಣಿಯಾಗುವ ದೃಷ್ಟಿಕೋನದಿಂದ ದಲಿತ-ಬಂಡಾಯ ಚಳುವಳಿ ಮತ್ತು ಸಾಹಿತ್ಯ ಹುಟ್ಟಿಕೊಂಡಿತೆಂದು ಹೇಳಬಹುದು"[1] ಈ ದಲಿತ ಬಂಡಾಯ ಚಳುವಳಿಯಲ್ಲಿ ಹೊಸ ತಲೆಮಾರಿನ ಜನಪರ ಕಾಳಜಿಯ ಅನೇಕ ಬರಹಗಾರರು ಪಾಲ್ಗೊಂಡು ಸಂಘಟನಾತ್ಮಕ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡು ಬರಹವನ್ನು ಮಾಡತೊಡಗಿದರು. ಅಂಥವರಲ್ಲಿ ಜಿ.ಎನ್ ಮೋಹನ್ ಅವರು ಕೂಡಾ ಒಬ್ಬರಾಗಿದ್ದಾರೆ. ಬಂಡಾಯ ಚಳುವಳಿ, ಸಮುದಾಯ ಸಂಘಟನೆ, ಜನಪರ ಹೋರಾಟಗಳ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ಧುಮುಕಿದ ಜಿ.ಎನ್.ಮೋಹನ್ ಅವರು ಕಾವ್ಯ, ನಾಟಕ, ಪ್ರವಾಸ ಕಥನ, ವಿಚಾರ, ವಿಮರ್ಶೆ, ಅನುವಾದ ರಂಗ ಚಟುವಟಿಕೆ, ಮಾಧ್ಯಮ ಚಟುವಟಿಕೆ ಹೀಗೆ ಹತ್ತಾರು ಹಾದಿಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ತಮ್ಮ ವಿಶಿಷ್ಟ ನಿಲುವು ಚಿಂತನಾ ಕ್ರಮಗಳನ್ನು ತಾವು ನಂಬಿದ ಮೌಲ್ಯಗಳನ್ನು ಯಾರ ಹಂಗು, ಮುಲಾಜುಗಳಿಗೆ ಒಳಗಾಗದೆ, ಗಟ್ಟಿಯಾದ ಸೈದ್ಧಾಂತಿಕ ತಳಹದಿಯ ಮೇಲೆ ಬರೆಯುತ್ತಾರೆ ಎನ್ನುವ ಕಾರಣಕ್ಕೆ ಮೋಹನ ಅವರ ವ್ಯಕ್ತಿತ್ವ ಬರಹಗಳಿಗೆ ಸಾಹಿತ್ಯಿಕ ಮತ್ತು ಸಾಂಸ್ಕೃತಿಕವಾಗಿ ಎತ್ತರ ಸ್ಥಾನವಿದೆ.

ಜಿ. ಎನ್. ಮೋಹನ್ ಅವರು ಶೇಕ್ಸಪೀಯರನಿಗೊಂದು ಪ್ರಶ್ನೆ ಎಂಬ ಕವನ ಸಂಕಲನ, ನನ್ನೊಳಗಿನ ಹಾಡು, ಕ್ಯೂಬಾ ಪ್ರವಾಸ ಕಥನ, ಬರ ಎಂದರೆ ಎಲ್ಲರಿಗೂ ಇಷ್ಟ ಅನುವಾದ, ಮಿರ್ಚಿ ಮಸಾಲೆ ಅಂಕಣ, ರಂಗಕಿನ್ನರಿ, ಥರ್ಡ್‌ಬೆಲ್ ರಂಗಕರ್ಮಿ, ಕಲಾವಿದರು, ರಂಗಭೂಮಿಗಳಿಗೆ ಸಂಬಂಧಿಸಿದ ಬರಹಗಳನ್ನೊಳಗೊಂಡ ಕೃತಿಗಳು, ಅಲ್ಲದೆ ಅನೇಕ ಪತ್ರಿಕೆಗಳಿಗೆ ಅಂಕಣಗಳು ಡೆಂಕಲ್ ಮತ್ತು ಸ್ಯಾಟ್‌ಲೈಟ್ ಟಿ.ವ್ಹಿ ಮುಂತಾದ ವೈಚಾರಿಕ ಸಾಂಸ್ಕೃತಿಕ ಆಯಾಮಗಳುಳ್ಳ ಲೇಖನಗಳನ್ನು ಬರೆದಿದ್ದಾರೆ ಈಗ 'ಈ' ಟಿ.ವ್ಹಿ ಕನ್ನಡ ವಾಹಿನಿಯ ಮುಖ್ಯ ಸಂಪದಾಕರಾಗಿ ಹಲವಾರು ಸೃಜನಾತ್ಮಕ ಕಾರ್ಯಕ್ರಮಗಳ ಮೂಲಕ ಸಾಂಸ್ಕೃತಿಕ ಪರಿಚಾರಕರಾಗಿದ್ದಾರೆ. ವಾರವಾದವೂ ಈ ಟಿ.ವ್ಹಿ ವಾಹಿನಿಯಲ್ಲಿ ಬರುವ ಅವರ ವಾಕ್ ಟಾಕ್ ವುಯಿತ್ ಎಡಿಟರ್, ಖಾಸಬಾತ್, ಸೈಡ್‌ವಿಂಗ ಕಾರ್ಯಕ್ರಮಗಳಲ್ಲಿ ನಡೆ ನುಡಿ, ಸಾಹಿತ್ಯಕ, ಸಾಮಾಜಿಕ ಸಾಂಸ್ಕೃತಿಕ ಚರ್ಚೆಗಳೇ ಅವರ ಕ್ರಿಯಾಶೀಲತೆಗೆ ಸಾಕ್ಷಿಯಾಗಿವೆ. ಅವರ 'ರಂಗಕಿನ್ನರಿ ಕೃತಿಗೆ ೨೦೧೨ನೇ ಸಾಲಿನ ನಾಟಕ ಅಕಾಡೆಮಿ ಪ್ರಶಸ್ತಿ ಥರ್ಡ್‌ಬೆಲ್' ಕೃತಿಗೆ ೨೦೧೩ನೇ ಸಾಲಿನ ನಾಟಕ ಅಕಾಡೆಮಿ ಪ್ರಶಸ್ತಿ ಬಂದಿವೆ. ಇದು ಅವರ ಪ್ರತಿಭಾ ಶಕ್ತಿಯ ಕುರುಹು ಹೌದು. ಹಾಗೆ ನೋಡಿದರೆ ಈ ಹೊತ್ತಿನ ಮುಖ್ಯ ಚಿಂತನೆಯ ಧಾರೆಯೇ ಸಂಸ್ಕೃತಿ ಚಿಂತನೆಯದ್ದಾಗಿದೆ. ಸಾಹಿತ್ಯ ವಿಮರ್ಶೆಕೂಡ ಸಾಂಸ್ಕೃತಿಕ ವಿಮರ್ಶೆಯಾಗಬೇಕೆಂಬುದು ಮೋಹನ ಅವರ ನಿಲುವು ಆಗಿದೆ. ಈ ಸಂಸ್ಕೃತಿ ಚಿಂತನೆ ಪ್ರಾರಂಭಗೊಂಡಿದ್ದು ಬಹುಶಃ ಕಳೆದ ಶತಮಾನದ ವಸಾಹತುಶಾಹಿ ಸಂದರ್ಭದಲ್ಲಿ ಪಾಶ್ಚಾತ್ಯರಲ್ಲಿ ಮ್ಯಾಥ್ಯೂ ಅರ್ನಾಲ್ಡ ಎಂಬ ಮಹಾಶಯ ತನ್ನ ಸಂಸ್ಕೃತಿ ಮತ್ತು ಅರಾಜಕತೆ ಎಂಬ ಕೃತಿಯಲ್ಲಿ ಈ ಪರಿಕಲ್ಪನೆಗೆ ಚಾಲನೆ ಕೊಟ್ಟನು. ಆತನು ತನ್ನ ಈ ಕೃತಿಯಲ್ಲಿ ಸಂಸ್ಕೃತಿಯ ಚಹರೆಗಳನ್ನು ಗುರುತಿಸಲು ಪ್ರಯತ್ನಿಸಿದ "ಅವನ ಪ್ರಕಾರ 'ಸಂಸ್ಕೃತಿ' ಎಂಬುದು ಉದಾತ್ ಲಕ್ಷಣಗಳಿಂದ ಕೂಡಿದ್ದು ಅದನ್ನು ಅವನು 'ಹೈಕಲ್ಚರ್' ಎಂಬ ಅರ್ಥದಲ್ಲಿ ವಿವರಿಸಲು ಪ್ರಯತ್ನಿಸಿದ್ದಾನೆ."[2] ಅದನ್ನು ನಾವು ಸುಸಂಸ್ಕೃತಿ ಎಂದು ಕರೆಯುತ್ತೇವೆ. ಭಾರತೀಯರಲ್ಲಿ ಸಂಸ್ಕೃತಿ ಕುರಿತು ಚಿಂತನೆಗೆ ಚಾಲನೆ ಕೊಟ್ಟವರಲ್ಲಿ ರವೀಂದ್ರನಾಥ ಟ್ಯಾಗೋರ್ ಕನ್ನಡದಲ್ಲಿ ಡಿ.ವ್ಹಿ ಗುಂಡಪ್ಪ, ದೇವುಡು ಮುಂತಾದವರು, ಡಿ.ವ್ಹಿ.ಜಿ ಯವರು ಸಂಸ್ಕೃತಿ ಪದದ ಬಗೆಗೆ ಅನೇಕ ವಿವರಗಳನ್ನು ಕೊಡುತ್ತಾ ಹೋಗುತ್ತಾರೆ. ಡಿ.ವ್ಹಿ.ಜಿಯವರು ಸಂಸ್ಕಾರ

ಮತ್ತು ಸಂಸ್ಕೃತಿ ಪದಕ್ಕೂ ಸಂಬಂಧ ಕಲ್ಪಿಸಿ ಸಮ್ಯಕ್ ಕೃತಿಯಿಂದ ಸಂಸ್ಕೃತಿ ಎಂದಾಯಿತು ಎನ್ನುತ್ತಾರೆ. ನವೋದಯದ ಸಂದರ್ಭದಲ್ಲಿ ಪ್ರಾರಂಭವಾದ ಸಂಸ್ಕೃತಿ ಅರ್ಥ ಲಕ್ಷಣ. ಸ್ವರೂಪ ಬಗೆಗಿನ ನವ್ಯ ದಲಿತ, ಬಂಡಾಯದವರೆಗೂ ನಡದಿದೆ. ಬಂಡಾಯ ಸಂದರ್ಭದಲ್ಲಿ ಬರಗೂರ ರಾಮಚಂದ್ರಪ್ಪ, ಡಿ.ಆರ್.ನಾಗರಾಜ, ಕೆ.ವ್ಹಿ.ಎಸ್, ಓ.ಎಲ್.ನಾಗಭೂಷಣ, ಪೂರ್ಣಚಂದ್ರ ತೇಜಸ್ವಿ, ಬಿಳಮಲೆ, ಎಂ.ಎಸ್.ಆಶಾದೇವಿ, ಮಲ್ಲೇಪುರಂ.ಜಿ.ವೆಂಕಟೇಶ, ರಹಮತ್ ತರೀಕೆರಿ, ಜಿ.ಎನ್.ಮೋಹನ್ ಮೊದಲಾದವರು ಸಂಸ್ಕೃತಿ ಕುರಿತ ಲೇಖನಗಳು ಮತ್ತು ಚಿಂತನಗಳು ಪ್ರಮುಖ ಪಾತ್ರ ವಹಿಸಿದೆ. ಸಂಸ್ಕೃತಿ ಕಥನ, ಸಂಸ್ಕೃತಿ ಸ್ವರೂಪ ಮುಂತಾದ ಸಂಸ್ಕೃತಿಗೆ ಸಂಬಂಧಿಸಿದ ನುಡಿಗಟ್ಟುಗಳನ್ನು ರೂಪಗೊಳಿಸಿದರು.

ಜಿ. ಎನ್. ಮೋಹನ್ ಅವರು ಸಂಸ್ಕೃತಿಗೆ ಒಂದೇ ಅರ್ಥವಾಗಲಿ, ಗುಣವಾಗಲಿ, ಚಹರೆಯಾಗಲಿ ಇರುವುದಿಲ್ಲ ಅದು ಬಹು ಆಯಾಮಗಳಲ್ಲಿ ತನ್ನ ಚಹರೆಗಳನ್ನು ವ್ಯಕ್ತಗೊಳಿಸುತ್ತಾ ಹೋಗುತ್ತದೆ. ಹಾಗಾಗಿ ಭಾರತೀಯ ಸಂಸ್ಕೃತಿಯನ್ನು ಏಕ ನೆಲೆಯಲ್ಲಿ ನೋಡುವುದು ಸಾಧ್ಯವಿಲ್ಲವೆನ್ನುತ್ತಾರೆ. ಸಂಸ್ಕೃತಿ ಎಂಬುದು ಬರೀಯ ವಿದ್ಯೆಯಲ್ಲ, ಅದು ವಿದ್ಯಾಕುಸುಮದ ಪರಾಗ. ಅದು ಸಾಹಿತ್ಯ ಪರಾಮರ್ಶೆಯ ಅಮೃತ ಲೋಕಾನುಭವ ವಿವೇಕವಾಗಿರುತ್ತದೆ. ಜೀವನದ ನಾನಾ ವಿಷಯಗಳ, ನಾನಾ ಧ್ಯೇಯ ಜ್ಞಾನದಿಂದಾದ ಸಮನ್ವಯ ಸ್ವಾರಸ್ಯ ಎಂಬುದು ಅವರ ಚಿಂತನೆಯಾಗಿದೆ. ಸಂಸ್ಕೃತಿಗೆ ಭೂಮಿತತ್ವ ಇದೆ ಎಂಬ ಬರಗೂರರ ಮಾತನ್ನು ಎತ್ತಿಕೊಂಡು ನಿಷ್ಕರ್ಷಕ್ಕೊಡ್ಡುವ ಮೋಹನ್ ಅವರು ಭೂಮಿಯನ್ನು ಫಲವತ್ತನ್ನಾಗಿ ಮಾಡುವ ಗುಣ ದಕ್ಕಿದೆ ಹಾಗಾಗಿ ಸಂಸ್ಕೃತಿಯನ್ನು ಶ್ರಮದ ಪರಿಕಲ್ಪನೆಯಾಗಿ ನೋಡುತ್ತಾರೆ. ಈ ಶ್ರಮವೇ ಸೃಜನಶೀಲ ಶಕ್ತಿಯಾಗಿ ಸಾಹಿತ್ಯ ಸೃಷ್ಟಿಗೊಳ್ಳುತ್ತದೆ. ಸಾಹಿತ್ಯ ಸೃಷ್ಟಿಯೂ ಒಂದು ಶ್ರಮದ ಫಲವೇ ಎಂಬುದು ಅವರ ವಾದವಾಗಿದೆ. ಅವರು 'ಬರ ಎಂದರೆ ಎಲ್ಲರಿಗೂ ಇಷ್ಟ' ಎಂಬ ಕೃತಿಯಲ್ಲಿ ಸಂಸ್ಕೃತಿಯ ಚಿಂತನೆಯ ಅನೇಕ ಒಳನೋಟಗಳನ್ನು ಕಟ್ಟಿಕೊಟ್ಟಿರುವುದನ್ನು ನೋಡಬೇಕು ನಮ್ಮ ಭೂಮಿತತ್ವ ಸಂಸ್ಕೃತಿ ಮತ್ತು ಶ್ರಮ ಸಂಸ್ಕೃತಿ ತತ್ವದ ಮೇಲೆ ಜಾಗತೀಕರಣದ ಭೋಗ ಸಂಸ್ಕೃತಿ ಹೇಗೆ ಆಕ್ರಮಣ ಮಾಡುತ್ತಿದೆಯೆನ್ನುವ ಎಚ್ಚರವನ್ನು ತಮ್ಮ 'ಡೆಂಕಲ್ ಮತ್ತು ಸ್ಯಾಟ್‌ಲೈಟ್ ಟಿ.ವ್ಹಿ ಎಂಬ ಲೇಖನದಲ್ಲಿ ವಿವರಣೆಗೊಳಿಸುತ್ತಾರೆ ಅವರು' ಭಾರತಕ್ಕೆ ಸ್ಯಾಟ್‌ಲೈಟ್ ಟಿ.ವ್ಹಿಯ ಆಗಮನ ಒಂದು ದಾಳಿ ಎಂದು ಕರೆಯುತ್ತಾರೆ. ಯುದ್ಧಗಳ ತಾಯಿ ಎಂದು ಬಣ್ಣಿಸಲ್ಪಟ್ಟ ಅಮೇರಿಕಾ-ಇರಾಕ್ ಯುದ್ಧ ಕೇವಲ ಬಾಂಬ್‌ಗಳ ಮೂಲಕ ಮಾತ್ರವಲ್ಲ ಮಾಧ್ಯಮಗಳ ಮೂಲಕವೂ ಹೇಗೆ ಯುದ್ಧ ನಡೆಸಬಹುದೆಂದು"[೩] ಅಂಶವನ್ನು ಮೋಹನ್ ಅವರು ಮನದಟ್ಟು ಮಾಡಿಕೊಡುತ್ತಾರೆ. ಡೆಂಕಲ್ ಪ್ರಸ್ತಾದದಿಂದ ದೇಶದ ಬಹು ಸಂಸ್ಕೃತಿ ಚಹರೆಗಳಿಗೆ ಧಕ್ಕೆ ಆಗುವ ಅಪಾಯವನ್ನು ತಮ್ಮ ಚರ್ಚೆ, ಚಿಂತನೆಗಳಲ್ಲಿ ಅನಾವರಣಗೊಳಿಸುತ್ತಾರೆ ಎಂಬುದು ಇಲ್ಲಿನ ಅತ್ಯಂತ ಪ್ರಮುಖ ಸಂಗತಿಯಾಗಿದೆ. ಒಟ್ಟಾರೆ ಜಿ.ಎನ್ ಮೋಹನ ಅವರು ತಮ್ಮ ಸಾಪೇಕ್ಷ ವಿಚಾರಧಾರೆಗಳಿಂದ ಹಲವು ಪ್ರಮುಖ ಸಂಗತಿ ಒಳನೋಟಗಳನ್ನು ಅವರ ಬರಹಗಳಲ್ಲಿ ಕಾಣುತ್ತೇವೆ ಎಂದು ಹೇಳಬಹುದು.

**ಅಡಿಟಿಪ್ಪಣಿಗಳು :**

೧. ಬರಗೂರ ರಾಮಚಂದ್ರಪ್ಪ ಬಂಡಾಯದ ಗಟ್ಟಿ ದನಿ - ಪು.೬ (ಸಂ) ಸತೀಶ ಕುಲಕರ್ಣಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೨೦೦೪.

೨. ಲಿಂಗದೇವರು ಹಳೆಮನೆ ಸಂಸ್ಕೃತಿ ಶೋಧ, ಪು.೪, ಅರುಹು ಕುರುಹು ಪತ್ರಿಕೆ ೨೦೧೦.

೩. ಜಿ.ಎನ್ ಮೋಹನ್, ಡೆಂಕಲ್ ಮತ್ತು ಸ್ಯಾಟ್‌ಲೈಟ್ ಟಿ.ವ್ಹಿ. ಪು ೧೯೬, ವಿಚಾರ ಸಾಹಿತ್ಯ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೯೬.


■■

ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ



Scanned with CamScanner

RNI Regd. No. KARBIL/2014/54464




जो दीन-हीन, पीडित, निर्बल,
मैं हूँ उनका जीवन संबल!
जो मोह-छिन्न, जग से विभक्त,
वे मुझ में मिलें, बनें सशक्त!
जो अहंपूर्ण, वे अन्ध-कूप,
जो नम्र, उठे बन कीर्ति-स्तूप!
जो छिन्न-भिन्न, जल-कण असार,
जो मिले, बने सागर अपार,
जग नाम-रूपमय अन्धकार,
मैं चिर-प्रकाश, मैं मुक्ति-द्वार!

- सुमित्रानंदन पंत

ಯಾರು ದೀನ, ಹೀನ, ಪೀಡಿತ ದುರ್ಬಲರೋ
ನಾನು ಇರುವೆ ಅವರ ಜೀವನದ ಬಲ !
ಯಾರು ಮೋಹದಿಂದ ಛಿದ್ರರೋ ಜಗದಿಂದ ಬೇರ್ಪಟ್ಟಿರುವರೋ
ಅವರು ನನ್ನನ್ನು ಸೇರಿ ಆಗಲಿ ಬಲಿಷ್ಠ
ಯಾರು ಅಹಂಕಾರಿಯೋ, ಅವರು ಅಜ್ಞಾನಿ,
ಯಾರು ವಿನಮ್ರರೋ ಎದ್ದೇಳಿ ಕೀರ್ತಿ ಸ್ತೂಪರಾಗಿ;
ಯಾರು ಛಿದ್ರ-ವಿದ್ರ ಜಲಕಣದಂತೆ ನಿಸ್ಸಾರ
ಅವರು ಸೇರಿ ಆಗುವರು ಅಪಾದ ಸಾಗರ
ಜಗದ ನಾಮ, ರೂಪಮಯ ಕತ್ತಲು,
ನಾನು ಚಿರ ಪ್ರಕಾಶ, ನಾನು ಮುಕ್ತಿ ದ್ವಾರ;

– ಸುಮಿತ್ರಾನಂದನ ಪಂತ



'ದೇವರದೊಂದು ಗೋರಿಯ ಕಟ್ಟಿ
ಧರ್ಮದ ಧೂಪಕೆ ಬೆಂಕಿಯನಿಕ್ಕಿ
ಗಣಗಣ ಬಾರಿಸಿ ಪ್ರಾಣದ ಗಂಟೆಯ
ಸಾಲಿನ ನೋವಿಗೆ ಕಲಮಲವೆದ್ದು
ನೆಲವನ್ನೆಲ್ಲಾ ತುತ್ತುವೆನೆಂದು
ಗದರುತ್ತಿಹುದು ಗರ್ಜಿಸುತಿಹುದು
ಬಡವರ ಬಗ್ಗರ ತುತ್ತಿನ ಚೀಲದ
ಒಳಗಿನ ಒಳಗಿನ ಒಳದನಿಯೊಂದು'

– ದ. ರಾ. ಬೇಂದ್ರೆ

भगवान की एक समाधि बाँधकर
धर्म के धूप की आग लगाकर
घन-घन बजाकर प्राण की घंटी
कर्ज के पीडा से तलमल कर
भूमि को निवाला बनाकर
गडगड गरजकर
गरीब के कौर की थैली के
अंदर ही अंदर की अंतर्ध्वनि

-द. रा. बेंद्रे

ISSN 2320-0391

**सौम्य प्रकाशन**
'कबीर कुंज' महाबलेश्वर कॉलनी, दर्गा जेल के सामने,
विजयपुर - 586103 (कर्नाटक)

**ಸೌಮ್ಯ ಪ್ರಕಾಶನ**
'ಕಬೀರ ಕುಂಜ' ಮಹಾಬಳೇಶ್ವರ ಕಾಲೋನಿ, ದರ್ಗಾ ಜೇಲ ಮುಂದೆ,
ವಿಜಯಪುರ – ೫೮೬೧೦೩ (ಕರ್ನಾಟಕ)

Scanned with CamScanner